ಅ) ಹೆಣ್ಣೂರು ಬಾಣಸವಾಡಿ ಬಡಾವಣೆಯಲ್ಲಿರುವ ಮನೆಗಳ ಸಂಖ್ಯೆ?

ಆ) ಕೆ.ಜಿ. ವೃತ್ತ, ಸಿಟಿ ಮಾರ್ಕೆಟ್ ಮತ್ತು ಇತರೆ ಸ್ಥಳಗಳಿಂದ ಹೆಣ್ಣೂರು ಬಾಣಸವಾಡಿ ಬಡಾವಣೆಗೆ ಆಚರಣೆಯಾಗುತ್ತಿರುವ ಬಿ.ಟಿ.ಎಸ್. ಕೆಂಪು ಫಲಕದ ಬಸ್ಸುಗಳ ಸಂಖ್ಯೆ;

ಇ) ಇದುವರೆವಿಗೂ ಹೆಣ್ಣೂರು ಬಾಣಸವಾಡಿ ಮಾರ್ಗವಾಗಿ ಹಾದುಹೋಗುವ ಬಸ್ಸುಗಳನ್ನು ಪ್ರಾರಂಭಿಸದೇ ಇರುವುದು ನಿಜವೆ;

ಈ) ಹಾಗಿದ್ದಲ್ಲಿ, ಸರ್ಕಾರವು ಮೇಲ್ಕಂಡ ಬಡಾವಣೆಗೆ ಬಸ್ಸುಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) 1350

ಆ) ಬೆಂಗಳೂರು ನಗರ ಸಾರಿಗೆ 7 ಬಸ್ಸುಗಳೊಂದಿಗೆ 110 ಏಕಮುಖ ಸುತ್ತುವಳಿಗಳನ್ನು ಹೆಣ್ಣೂರು ಬಾಣಸವಾಡಿ ಬಡಾವಣೆಗೆ ಮತ್ತು ಮುಂದಿನ ಸ್ಥಳಗಳಿಗೆ ಕೆಂಪೇಗೌಡ ವೃತ್ತ ಸಿಟಿ ಮಾರುಕಟ್ಟೆ ಮತ್ತು ನಗರದ ಇತರೆ ಸ್ಥಳಗಳಿಂದ ಕಾರ್ಯಾಚರಣೆ ಮಾಡಲಾಗುತ್ತಿದೆ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ವಿಷಯ : ತಾಲ್ಲೂಕು ಪಂಚಾಯಿತಿ ಸಭೆಗೆ ಸಾರಿಗೆ ಅಧಿಕಾರಿಗಳ ಗೈರು ಹಾಜರಿ ಕುರಿತು.

Q : 510

ಶ್ರೀ ಬಾಬುರಾವ್ ಚವಾಣ್ (ಶಹಾಬಾದ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತಾಲ್ಲೂಕು ಪಂಚಾಯಿತಿ ಸಮಿತಿಯ ಪ್ರತಿ ಸಭೆಗೆ ಹಾಗೂ ಶಾಸಕರೂ ಕರೆಯುವ ಹೋಬಳಿ ಮಟ್ಟದ ಜನಸಂಪರ್ಕ ಸಭೆಗೂ ಸಾರಿಗೆ ಅಧಿಕಾರಿಗಳೂ ಉದ್ದೇಶಪೂರ್ವಕವಾಗಿ ಗೈರು ಹಾಜರಿಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸಾರಿಗೆ ಇಲಾಖೆ ಅಧಿಕಾರಿಗಳು ಹಾಗೂ ಶಾಸಕರು ಕರೆಯುವ ಜನಸಂಪರ್ಕ ಸಭೆಗೆ ಹಾಗೂ ತಾಲ್ಲೂಕು ಪಂಚಾಯಿತಿ ಸಮಿತಿ ಸಭೆಗಳಿಗೆ ಹಾಜರಾಗದ ಅಧಿಕಾರಿಗಳ ಹೆಸರುಗಳನ್ನು ದಿನಾಂಕದೊಂದಿಗೆ ಒದಗಿಸಲಾಗುವುದೇ?

ಇ) ಹಲವು ಸಭೆಗೆ ಬಾರದೇ ಇರಲು ಸಾರಿಗೆ ಅಧಿಕಾರಿಗಳ ಮೇಲೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಈ) ಸಭೆಗೆ ಬಾರದೆ ಇರುವ ಅಧಿಕಾರಿಗಳ ಮೇಲೆ ಸರ್ಕಾರ ಇನ್ನು ಮುಂದೆ ಆದರೂ ಶಿಸ್ತು ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಸಾರಿಗೆ ಇಲಾಖೆಗೆ ಸಂಬಂಧಪಟ್ಟಂತೆ ಪ್ರಾದೇಶಿಕ ಸಾರಿಗೆ ಕಛೇರಿಗಳು ಪ್ರತಿ ಜಿಲ್ಲಾ ಕೇಂದ್ರಗಳಲ್ಲಿ ಮಾತ್ರವಿದ್ದು, ತಾಲ್ಲೂಕು ಪಂಚಾಯತಿ ಸಮಿತಿಯ ಮಟ್ಟದಲ್ಲಿ ಇರುವುದಿಲ್ಲ. ಕೆಲವು ಜಿಲ್ಲೆಗಳಲ್ಲಿ ಉಪ ವಿಭಾಗದ ಮಟ್ಟದಲ್ಲಿ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಗಳಿದ್ದು, ಅಲ್ಲಿ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಇರುವರೇ ಹೊರತು, ತಾಲ್ಲೂಕು ಮಟ್ಟದಲ್ಲಿ ನಮ್ಮ ಯಾವ ಅಧಿಕಾರಿಗಳು ಇರುವುದಿಲ್ಲ. ಆದುದರಿಂದ ಹೋಬಳಿ ಮಟ್ಟದ ಜನಸಂಪರ್ಕ ಸಭೆಗೆ ಪ್ರಾದೇಶಿಕ ಸಾರಿಗೆ ಕಛೇರಿಯಿಂದ ಯಾರೂ ಹೋಗುವ ಸಾಧ್ಯತೆ ಇರುವುದಿಲ್ಲ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಅಧಿಕಾರಿಗಳು ತಾಲ್ಲೂಕಾ ಪಂಚಾಯಿತಿ ಸಭೆ ಹಾಗೂ ಶಾಸಕರು ಕರೆಯುವ ಹೋಬಳಿ ಮಟ್ಟದ ಜನಸಂಪರ್ಕ ಸಭೆಗಳಿಗೆ ಮೀಟಿಂಗ್ ನೋಟೀಸುಗಳು ಮುಂಚಿತವಾಗಿ ತಲುಪಿದಲ್ಲಿ ಹಾಜರಾಗಿರುತ್ತಾರೆ. ಮೀಟಿಂಗ್ ನೋಟೀಸುಗಳು ತಲುಪದೇ ಇರುವ ಹಾಗೂ ಕೆಲಸದ ಒತ್ತಡಗಳು ಇದ್ದಂತಹ ಸಂದರ್ಭದಲ್ಲಿ ಗೈರುಹಾಜರು ಇರುತ್ತಾರೆ.

ಆ) ಇಲ್ಲ

ಇ) ಸಂಬಂಧಪಟ್ಟವರಿಂದ ಈ ಬಗ್ಗೆ ದೂರುಗಳು ಬಂದಲ್ಲಿ ಅದಕ್ಕೆ ಸಂಬಂಧಪಟ್ಟ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಅಧಿಕಾರಿಗಳಿಂದ ವಿವರಣೆಯನ್ನು ಸಂಸ್ಥೆಯು ಪಡೆಯುವುದು ಮತ್ತು ಸಭೆಗಳಿಗೆ ನಿಯಮಿತವಾಗಿ ಹಾಜರಾಗಲು ಸೂಕ್ತ ನಿರ್ದೇಶನವನ್ನು ನೀಡಲಾಗುತ್ತಿದೆ.

ಈ) ಸಭೆಗಳಿಗೆ ಗೈರುಹಾಜರಾದವರ ಬಗ್ಗೆ ನೀಡಿದ ವಿವರಣೆ ಸಮರ್ಪಕ ಇಲ್ಲದಿದ್ದಲ್ಲಿ ಅಂತಹವರ ಮೇಲೆ ಸೂಕ್ತ ಕ್ರಮವನ್ನು ಜರುಗಿಸಲಾಗುವುದು.

ವಿಷಯ : ಕೈಗಾರಿಕಾ ಭೂ ಮಂಜೂರಾತಿ.

Q : 182

ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೆ.ಐ.ಎ.ಡಿ.ಬಿ.ಯವರು ವೈಟ್‌ಫೀಲ್ಡ್ ಮತ್ತು ಬೊಮ್ಮಸಂದ್ರ ಕೈಗಾರಿಕೆಯ 5 ಎಕರೆ ಭೂಮಿಯನ್ನು ಎಷ್ಟು ಕೈಗಾರಿಕಾ ಉದ್ದಿಮೆಗಳಿಗೆ ಕೊಟ್ಟಿರುವರು?

ಆ) ಆ ಭೂಮಿಯನ್ನು ಎಷ್ಟು ವರ್ಷಗಳಲ್ಲಿ ಅಭಿವೃದ್ಧಿ ಕಾರ್ಯ ಮಾಡಬೇಕಾಗಿದೆ?

ಇ) ಆ ಅವಧಿಯೊಳಗೆ ಅಭಿವೃದ್ಧಿ ಕಾರ್ಯ ಮಾಡದೇ ಇದ್ದಲ್ಲಿ, ಅವರ ಮೇಲೆ ಕ್ರಮ ಕೈಗೊಳ್ಳಲಾಗುವುದೇ;